

ಕಾಲು ತೊಳೆಯದೇ ಹತ್ತಲು ಹೊರಟ ಪುಟ್ಟಿಗೆ ಸ್ವಲ್ಪ ದೊಡ್ಡ ದನಿಯಲ್ಲಿ 'ನನ್ನ ಕಾರೆಲ್ಲಾ ಮರಳಾಗ್ತದೆ ಪುಟ್ಟಿ, ಸುಮ್ನೆ ಕಾಲು ತೊಳಿ' ಎಂದು ಚಿಕ್ಕಪ್ಪ ಹೇಳಿದ ಮೇಲೆ ತೆಪ್ಪಗೆ ತೊಳೆಯಿಸಿಕೊಂಡಳು.

ಪೀಂ... ಪೀಂ... ಅಂತ ಶಬ್ದ ಬರುವ ಹಾರ್ನು ಹಾಕುತ್ತಾ ಸೈಕಲಿನಲ್ಲಿ ಒಂದು ಬಿಳಿಯ ಮರದ ಪೆಟ್ಟಿಗೆ ಇಟ್ಟುಕೊಂಡು ಪಕ್ಕದಲ್ಲೇ ಹಾದು ಹೋಗುತ್ತಿದ್ದ ಒಬ್ಬ ಮಾಮನನ್ನು ನಿಲ್ಲಿಸಿ ಎಲ್ಲರಿಗೂ ಐಸ್ ಕ್ಯಾಂಡಿ ಕೊಡಿಸಿದರು ಚಿಕ್ಕಪ್ಪ. ಮಕ್ಕಳಿಗೆ ಸಂತೋಷದಲ್ಲಿ ಮಾತೇ ಹೊರಡಲಿಲ್ಲ. ಅದು ತಿಂದಾದ ಮೇಲೆ ಮಾತನಾಡಿದರೆ ಆ ಮಾತುಗಳು ಅರ್ಥವಾಗುತ್ತಿರಲಿಲ್ಲ, ಅಷ್ಟು ತಂಪಿಗೆ ನಾಲಿಗೆ ದಪ್ಪ ದಪ್ಪವಾಗಿತ್ತು. ಕಳೆದ ಸಲ ತೇರಿನಲ್ಲಿ ಅಪ್ಪ ಕೊಡಿಸಿದ್ದು ನೆನಪಾಯ್ತು ಜನ್ನುವಿಗೆ. ತಿಮ್ಮುವಿಗೆ ಈಗ ತನ್ನ ಅಮ್ಮ, ತಂಗಿಗೂ ಇದನ್ನು ತಿನ್ನಿಸುವ ಹಾಗೆ ಇದ್ದರೆ ಅನ್ನುವ ಆಸೆ. ಅದನ್ನು ಜನ್ನುವಿಗೆ ಮೆಲು ದನಿಯಲ್ಲಿ ಹೇಳಿದ. ಮುಂದಿನ ತೇರಿಗೆ ನಾವೆಲ್ಲಾ ಹೋದಾಗ ತಿನ್ನೋಣ ಎಂದು ಆಶ್ವಾಸನೆ ಕೊಟ್ಟ ಜನ್ನುವಿಗೆ ಯಾಕೋ ಅಪರಾಧಿ ಭಾವ ಕಾಡಿತು. ನಾನಿಲ್ಲಿ ನನ್ನ ಅಕ್ಕ ತಂಗಿಯೊಟ್ಟಿಗೆ, ಅಮ್ಮ - ಚಿಕ್ಕಮ್ಮನೊಟ್ಟಿಗೆ ಆರಾಮಾಗಿ ಕುಣಿದು ಕುಪ್ಪಳಿಸುತ್ತಿದ್ದೇನೆ. ನಾನು ತಿಂದಿದ್ದು ಅಮ್ಮ ತಿನ್ನಬೇಕು, ನೋಡಿದ್ದು ಅಮ್ಮ ನೋಡಬೇಕು ಅಂತ ಎಷ್ಟು ಆಸೆ ಮಾಡ್ತೇನೆ, ಪಾಪ ತಿಮ್ಮು ಅವನ ಅಮ್ಮನನ್ನ, ಅಪ್ಪಿಯನ್ನು ಬಿಟ್ಟು ಎಷ್ಟು ಸಮಯ ಆಯ್ತು, ಅವನಿಗೆ ಹೇಗೆ ಅನಿಸಬಹುದು ಅಂದೆಲ್ಲಾ ಅಂದುಕೊಂಡು ಅವನ ಮುಖ ಸಪ್ಪಗಾಯ್ತು. ಗೆಳೆಯನ ಭುಜ ಹಿಡಿದು

'ಮುಂದಿನ ಸಲ ನಾವು ಪಿನ್ನಮ್ಮ ಮನೆಗೆ ಬರುವಾಗ ಅಪ್ಪಿ ಮತ್ತೆ ನಿನ್ನಮ್ಮನನ್ನೂ ಕರ್ಕೊಂಡು ಬರುವಾ ಅಯ್ತಾ' ಅಂದ

ಇವರಿಬ್ಬರ ಮಾತು ಕೇಳುತ್ತಿದ್ದ ವಿಷ್ಣು ಚಿಕ್ಕಪ್ಪ, 'ನಮಗೂ ಕೊಡಿಸ್ತೀಯಾ ಜನ್ನು, ತೇರಿಗೆ ನಾವೆಲ್ಲಾ ಅಲ್ಲಿಗೇ ಬರುತ್ತೇವೆ' ಎಂದರು. ಹೂಂ ಎಂದು ತಲೆಯಾಡಿಸಿದ ಜನ್ನು ಕಣ್ಣುಗಳು ಆ ಮಬ್ಬು ಬೆಳಕಲ್ಲಿ ನಕ್ಷತ್ರದಂತೆ ಹೊಳೆಯುತ್ತಿದ್ದವು.

●